1160 ಶ್ರೀ ರಹೀಮ್ ಖಾನ್ (ಬೀದರ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮೀಣ ಅಭಿಯಾಂತ್ರಿ (ಆರ್.ಇ.ಸಿ.) ಮಹಾ ವಿದ್ಯಾಲಯ ಅತೀ ಅವಶ್ಯಕವಾಗಿದ್ದು, ಪ್ರಸಕ್ತ ಸಾಲಿನಲ್ಲಿ ಮಹಾ ವಿದ್ಯಾಲಯವನ್ನು ಮಂಜೂರು ಮಾಡಲಾಗುವುದೇ (ವಿವರ ನೀಡುವುದು);

ಆ) ಬೀದರ್ ವಿಧಾನಸಭಾ ಕ್ಷೇತ್ರದಲ್ಲಿ ಮಹಾ ವಿದ್ಯಾಲಯ ಅವಶ್ಯವಿದ್ದು, ಈ ಕ್ಷೇತ್ರಕ್ಕೆ ತಾಂತ್ರಿಕ ಮಹಾ ವಿದ್ಯಾಲಯವನ್ನು ಮಂಜೂರು ಮಾಡಲಾಗುವುದೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ರೀಜನಲ್ ಇಂಜಿನಿಯರಿಂಗ್ ಕಾಲೇಜುಗಳನ್ನು ಮಂಜೂರು ಮಾಡುವ ವಿಷಯ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

250 ಡಾ: ಮಹದೇವಪ್ಪ ಹೆಚ್.ಸಿ.(ಟಿ.ನರಸೀಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ಹಣವೆಷ್ಟು;

ಆ) ಬಿಡುಗಡೆಯಾದ ಅನುದಾನದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇನು;

ಇ) ಈ ಅಭಿವೃದ್ಧಿ ಕಾಮಗಾರಿಗಳಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಪಂಗಡದ ಜನಾಂಗದವರಿಗೆ ವಿನಿಯೋಗಿಸಲಾಗಿರುವ ಅನುದಾನದ ಹಣವೆಷ್ಟು; (ತಾಲ್ಲೂಕುವಾರು, ಜಿಲ್ಲಾವಾರು ಹಾಗೂ ಕ್ಷೇತ್ರವಾರು ಮಾಹಿತಿಯನ್ನು ಒದಗಿಸುವುದು)?

ಕು. ಶೋಭಾ ಕರಂದ್ಲಾಜೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿದೆ.

ವರ್ಷ	ಬಿಡುಗಡೆಯಾದ ಮೊತ್ತ (ರೂ.ಕೋಟಿಗಳಲ್ಲಿ)
2007–08	322.63
2008–09	684.63
2009–10	288.01
ಒಟ್ಟು	**1305.27**

ಆ) ಬಿಡುಗಡೆಯಾದ ಅನುದಾನದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಕೆಳಗಿನಂತೆ ನೀಡಲಾಗಿದೆ.

ವರ್ಷ	ಹಂತ	ಪ್ರಗತಿಯಲ್ಲಿದ್ದ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಉದ್ದ ಕಿ.ಮೀಗಳಲ್ಲಿ	ವೆಚ್ಚ (ರೂ.ಕೋಟಿಗಳಲ್ಲಿ)
2007–08	ಹಂತ III ರಿಂದ ಹಂತ VIರ ವರೆಗೆ	560	264	1495.94	342.40
2008–09	ಹಂತ IV ರಿಂದ ಹಂತ VIರ ವರೆಗೆ	579	301	2090.01	638.50
2009–10	ಹಂತ V ರಿಂದ ಹಂತ VIIIರ ವರೆಗೆ	879	136	963.09	281.62
ಒಟ್ಟು		**2018**	**701**	**4549.04**	**1262.52**

ಇ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಜನಾಂಗದವರಿಗೆ ಎಂದು ಪ್ರತ್ಯೇಕವಾಗಿ ಅನುದಾನ ನಿಗದಿಪಡಿಸಲಾಗುವುದಿಲ್ಲ. ಆದಾಗ್ಯೂ, ಈ ಯೋಜನೆಯಡಿ ಕೈಗೊಳ್ಳುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಂದ ಎಲ್ಲಾ ಗ್ರಾಮೀಣ ಜನತೆಗೆ ಸಂಪರ್ಕ ಕಲ್ಪಿಸಲಾಗುತ್ತಿದ್ದು, ಇದರಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಜನಾಂಗದವರು ಪ್ರಯೋಜನ ಹೊಂದುತ್ತಿದ್ದಾರೆ.